# ಪ್ರಥಮ ಸೆಮಿಸ್ಟರ್ ಬಿ.ಎ./ಬಿ.ಎಚ್.ಎಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2009
(ಫ್ರೆಶರ್ಸ್ ಸ್ಕೀಂ)
## ಕನ್ನಡ ಭಾಷೆ – I (ಭಾಗ - 1)
## ಸಾಹಿತ್ಯ ಸಂವಾದ – 1

ಸಮಯ : 3 ಗಂಟೆಗಳು ಗರಿಷ್ಠಾಂಕ : 90

### ಭಾಗ - 1

I. 1) ಐದು ಪದಗಳಿಗೆ ಅರ್ಥ ಬರೆಯಿರಿ. **(1×5=5)**

ಬಡಬಾಗ್ನಿ, ಕರಿ, ಚಾಗ, ಮಾಮರ, ಆಪೋಶನ, ಭೃಂಗ, ಆಗರ.

2) ಐದು ಪದಗಳಿಗೆ ಪರ್ಯಾಯ ಪದಗಳನ್ನು ಬರೆಯಿರಿ. **(1×5=5)**

ಬೊಕ್ಕತಲೆ, ತುಸು, ದಪ್ತರ್, ಜೋಗಿ, ಶುಕ, ಕುಮುದ, ಕಡಲು.

3) ಐದು ಪದಗಳ ಗ್ರಾಂಥಿಕ ರೂಪ ಬರೆಯಿರಿ. **(1×5=5)**

ಭೂಮ್ತಾಯಿ, ಬ್ಯಾಡ, ಚೆಲುವಿ, ನಾಲ್ಗೆಸೀಳ್ಸಿ, ಮುರದಾವ, ಹಾಕಬ್ಯಾಡ, ಸೊರಗ್ಯಾಳೋ.

4) ಐದು ಪದಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. **(1×5=5)**

ಉದ್ಯಮ, ಆಕಸ್ಮಾತ್, ಅನುರಕ್ತಿ, ಕೋರ್ಟು, ಕನಸು, ಬೇಡ, ಮಾತು.

5) ನಾಲ್ಕು ಪದಗಳಿಗೆ ಮೂಲ ಪದಗಳನ್ನು ಸೂಚಿಸಿ. **(1×4=4)**

ಹಾಲು, ಗೊಟ್ಟಿ, ದೆಸೆ, ಸಿರಿ, ಬನ.

6) ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. **(3×2=6)**

1) ದೇಶ ನೋಡು ಕೋಶ ಓದು
2) ತಾಳಿದವನು ಬಾಳಿಯಾನು
3) ಅತ್ತದರಿ ಇತ್ತ ಪುಲಿ.

### ಭಾಗ - 2

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(5×4=20)**

1) 'ಚಿಗರಿಗಂಗಳ ಚೆಲುವಿ' ಕವನದ ಸಾರಾಂಶವನ್ನು ಬರೆಯಿರಿ.

2) ಭಾಷಾ ಸೂತ್ರ ಎಂದರೇನು ? ತಿಳಿಸಿ.

3) ಬದುಕಿನ ನಾನಾ ಮುಖಗಳನ್ನು ಪರಿಚಯ ಮಾಡಿಕೊಳ್ಳುವಲ್ಲಿ ಪ್ರಯಾಣದ ಪಾತ್ರವನ್ನು ಕುರಿತು ಚರ್ಚಿಸಿ.

4) ಭಾವನೆಯನ್ನು ವ್ಯಕ್ತಪಡಿಸಲು ಭಾಷೆಯನ್ನು ಹೊರತುಪಡಿಸಿ ಇರುವ ಸಾಧನೆಗಳಾವುವು ? ತಿಳಿಸಿ.

5) ಕಲೆಗೂ ಮನುಷ್ಯನಿಗೂ ಇರುವ ಸಂಬಂಧವೇನು ? ವಿಶದಪಡಿಸಿ.

6) ಸೃಜನಶೀಲತೆಯು ಎದುರಿಸುತ್ತಿರುವ ಸವಾಲುಗಳಾವುವು ?

7) ಬನವಾಸಿಯ ವಿಷಯವಾಗಿ ಪಂಪನ ದೃಷ್ಟಿಕೋನ ಯಾವುದು ?

## ಭಾಗ - 3

III. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. **(10×2=20)**

1) ಜಾಗತೀಕರಣ ಪ್ರಕ್ರಿಯೆ ಪರಿಸರವನ್ನು ನಾಶಗೊಳಿಸುತ್ತಿದೆ ಎನ್ನಬಹುದೆ ? ಚರ್ಚಿಸಿ.

2) ಭಾಷೆಯ ವಿವಿಧ ಬಳಕೆಗಳಾವುವೆಂಬುದನ್ನು ಕುರಿತು ವಿಚಾರ ಮಾಡಿ.

3) 'ಅಜ್ಜಯ್ಯನ ಅಭ್ಯಂಜನ'ದ ಪೂರ್ವ ತಯಾರಿಯನ್ನು ಕುರಿತು ವಿವರಿಸಿ.

4) 'ಹೂವಾದ ಹುಡುಗಿ' ಕಥೆಯ ಆಶಯಗಳನ್ನು ವಿವರಿಸಿ.

## ಭಾಗ - 4

IV. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾದ ಉತ್ತರ ಬರೆಯಿರಿ. **(10×2=20)**

1) ಚರಿತ್ರೆಯ ಕಾಲ ಘಟ್ಟಗಳಲ್ಲಿ ಪ್ರಕೃತಿಗೂ ಮಾನವನಿಗೂ ಇರುವ ಸಂಬಂಧವನ್ನು ಕುರಿತು ತೇಜಸ್ವಿ ಅವರ ಕಥೆಯ ಸಹಾಯದಿಂದ ಸ್ಪಷ್ಟಪಡಿಸಿ.

2) ಹೊಸನಾಡಿನ ಪರಿಕಲ್ಪನೆಯನ್ನು 'ಕಟ್ಟುವೆವು ನಾವು' ಕವನದ ಸಹಾಯದಿಂದ ವಿಶದಪಡಿಸಿ.

3) ನೀವು ಮಾಡಿರುವ ಯಾವುದಾದರೂ ಪ್ರಯಾಣದ ವಿಶಿಷ್ಟ ಅನುಭವಗಳನ್ನು ಕುರಿತು ಬರೆಯಿರಿ.

4) 'ಪ್ರೀತಿ ಎಂದರೆ ಪಡೆಯುದಕ್ಕಿಂತ ನೀಡುವುದರಲ್ಲೆ ಹೆಚ್ಚು ಸುಖ' ಎಂಬುದನ್ನು ''ಮೃಗ ಮತ್ತು ಸುಂದರಿ'' ಕಥೆಯ ಆಧಾರದಿಂದ ಸ್ಪಷ್ಟಪಡಿಸಿ.

# ಪ್ರಥಮ ಸೆಮಿಸ್ಟರ್ ಬಿ.ಎ. ಪರೀಕ್ಷೆ, ನವೆಂಬರ್/ಡಿಸೆಂಬರ್ 2009
## (ರಿಪೀಟರ್ಸ್ ಸ್ಕೀಂ)
## ಕನ್ನಡ ಭಾಷೆ– I ಭಾಗ–1

ಸಮಯ : 3 ಗಂಟೆಗಳು ಗರಿಷ್ಠಾಂಕ : 90

I. ಅ) **ಒಂದು** ಪದ್ಯದ ಭಾವಾರ್ಥ ಬರೆಯಿರಿ : **(1×5=5)**

1) ಧನಮೆಂಬುದು ವಿಭುಗೆ ಯಶೋ
ಧನ ಮದ ನಿಂತಳಿಪಿ ಕಳಿಪಿ ಕಿಡೆ ಮಾಡಿರ್ದಾ
ತನ ಪಡೆದ ಧನಮದೇತಱ
ಧನ ಮದಱೆಂ ನಿಧನ ಮೆಯ್ದಿದರ್ ಪಲರರಸರ್.

2) ಒಕ್ಕಲಗೇರ್ಯಾಗ ಮಳಿರಾಜ ಅವರು
ಮಕ್ಕಳ ಮಾರ್ಯಾರು ಮಳಿರಾಜ
ಮಕ್ಕಳ ಮಾರಿ ರೊಕ್ಕ ಹಿಡಕೊಂಡು
ಭತ್ತಂತ ತಿರುಗ್ಯಾರ ಮಳಿರಾಜಾ.

ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ. **(2×3=6)**

1) ಇನಿಯವು ಮೊದಲೊಳ್ ನಂಜಿನ ಪನಿವೊಲ್.
2) ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.
3) ಕೆಲರಂತಕನ ನೆರೆಯೂರವರು.
4) ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮರಳುಮಾಡಿ.

ಇ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×2=4)**

ವಡ್ಡಾರಾಧನೆ, ಚಕ್ರರತ್ನ, ರಾಮನಾಥ, ಕನಕದಾಸ.

ಈ) ಈ ಗದ್ಯ ಭಾಗವನ್ನು **ಹೊಸಗನ್ನಡಕ್ಕೆ** ಪರಿವರ್ತಿಸಿ. **5**

ಎಣ್ಬರ್ ಕಳ್ಳರಂ ಕಂಡವರೊಳನೊರ್ವನಂ ಪಿಡಿದಟ್ಟೆನ್ನ ಮಗಂ
ನಿನ್ನನೆ ಪೋಲ್ಕುಂ ಪನ್ನೆರಟ್ಬರಿಸಂ ಪೋದೊನೆತ್ತ ಪೋದನೆಂದಱೆ
ಯೆನಾತನಂ ಕಾಣದಿರುಳುಂ ಪಗಲುಂ ನೆನೆದಟ್ಟು ಕಣ್ಗಳ್ ಬಾತಿರ್ಪು
ವಿಂದೆನಗೆ ಆತಂ ಬಂದಂತಿರೆ ನಿನ್ನಂ ಕಂಡು ಸಂತಸಮಾಯ್ತು
ಮಗನೆ ನೀ ಮೆಲ್ಲಂ ಬನ್ನಿಂ ಪೋಪಂ ಸಾರೆಯೂರಂ ಮಿಂದುಂಡುಟ್ಟು
ವಿಶ್ರಮಿಸಿ ನಾಳೆ ಪೋಪಿಂ......

II. ನಾಲ್ಕು ವಿಷಯಕ್ಕೆ ಸಂಕ್ಷಿಪ್ತ ಉತ್ತರ ಬರೆಯಿರಿ. (4×5=2

1) ಬಾಹುಬಲಿಯ ಪಶ್ಚಾತ್ತಾಪ.
2) ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾಗಿರುವ ಆತ್ಮಶೋಧನೆಯ ವಿಚಾರಗಳು.
3) ಉತ್ತರನ ವಿನಯವಂತಿಕೆ ಪ್ರಕಟವಾದ ಸಂದರ್ಭ.
4) ಕನಕದಾಸರ ದೃಷ್ಟಿಯಲ್ಲಿ ದಾನಧರ್ಮ.
5) ಮಳೀ ಹಾಡಿನ ಬರಗಾಲದ ದಾರುಣತೆ.
6) ಮಾದೇವರಾಯನ ಆತ್ಮಾಹುತಿ.

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=2

1) ಭರತ ಬಾಹುಬಲಿಯ ನಡುವೆ ಯುದ್ಧ ನಡೆದದ್ದೇಕೆ ? ಅದರ ಪರಿಣಾಮವೇನಾಯಿತು ? ವಿವರಿಸಿ.
2) ರಣಾಂಗಣದಲ್ಲಿ ನಡೆದ ಅರ್ಜುನ ಮತ್ತು ಉತ್ತರ ಕುಮಾರನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.
3) 'ಕೆರೆಗೆ ಹಾರ' ಕಥನ ಕಾವ್ಯದ ದುರಂತವನ್ನು ಪರಿಶೀಲಿಸಿ.

IV. ಐದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : (5×1=

1) 'ರೋಜಿ' ಎಂಬ ಹೆಸರಿನ ಪ್ರಾಣಿ ಯಾವುದು ?
2) 'ಸಾರಿಕೆ ಬೇಟೆ' ಎಂದರೇನು ?
3) ಪುಟ್ಟಾಚಾರಿಯ ವೃತ್ತಿ ಯಾವುದು ?
4) 'ಬಳ್ಳಿ ಮುಟ್ಟಿದ್ದು'– ಎಂದರೇನು ?
5) ಮಲೆನಾಡಿನಲ್ಲಿ ಸ್ನಾನದ ಮನೆಯನ್ನು ಏನೆಂದು ಕರೆಯುತ್ತಾರೆ ?
6) ಇಬ್ಬರು ಐಗಳ ಹೆಸರನ್ನು ತಿಳಿಸಿ.
7) ಕಾಡಿಗೆ ಹೋದವರು ಯಾರು ? ಯಾರು ?

V. ಒಂದು ವಿಷಯದ ಬಗ್ಗೆ ವಿವರಣಾತ್ಮಕ ಟಿಪ್ಪಣಿ ಬರೆಯಿರಿ : (1×5=

1) ಹಾವು-ನಾಯಿ ಹೋರಾಟದ ಪ್ರಸಂಗ.
2) ಪುಟ್ಟಾಚಾರಿಯ ಕಾಡುಕೋಳಿ.

VI. ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2×10=

1) 'ಕಾಡಿನಲ್ಲಿ ಕಳೆದ ಒಂದಿರುಳು' ಪ್ರಬಂಧದ ಸ್ವಾರಸ್ಯವನ್ನು ವಿವರಿಸಿ.
2) ಅಜ್ಜಯ್ಯನ ಅಭ್ಯಂಜನದ ಸ್ವಾರಸ್ಯವೇನು ? ವಿವರಿಸಿ.
3) ಐಗಳು ಬದಲಾದಂತೆ ಮಕ್ಕಳು ಹೊಸ ಹೊಸ ಅನುಭವಗಳನ್ನು ಹೇಗೆ ಪಡೆದುಕೊಂಡರು ? ತಿಳಿಸಿ.
4) ಪುಟ್ಟಾಚಾರಿಗೆ ಬೇಟೆಯ ಮೇಲಿದ್ದ ಆಕರ್ಷಣೆಯನ್ನೂ ಅದರಿಂದ ಅವನು ಫಜೀತಿ ಪಟ್ಟದ್ದನ್ನು ವಿಶದಪಡಿಸಿ.

---